ಸುಳ್ಯ ಕ್ಷೇತ್ರದಲ್ಲಿ ರಬ್ಬರ್ ಪ್ಲಾಂಟೇಷನ್

337- ಶ್ರೀ ಎಸ್. ಅಂಗಾರ (ಸುಳ್ಯ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುಳ್ಯ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಯಾವ ಯಾವ ರಬ್ಬರ್ ಪ್ಲಾಂಟೇಷನ್ ಸಬ್‌ಡಿವಿಜನ್ (ಉಪವಿಭಾಗದಲ್ಲಿ) ರಬ್ಬರ್ ಪ್ಲಾಂಟೇಷನ್ ಒಳಗಡೆ ಓಡಾಡಲು ಎಷ್ಟು ರಸ್ತೆಗಳಿವೆ, ಅದರ ದುರಸ್ತಿ ಕಾರ್ಯವನ್ನು ಯಾರು ಮಾಡುತ್ತಾರೆ?

ಆ) 1993-94, 1994-95ರ ಸಾಲಿನಲ್ಲಿ ಈ ರಸ್ತೆಗಳ ದುರಸ್ತಿಗೆ ಆದ ವೆಚ್ಚವೆಷ್ಟು(ಪೂರ್ಣ ವಿವರ ನೀಡುವುದು)?

ಶ್ರೀ ಹೆಚ್. ವೈ. ಮೇಟಿ (ಅರಣ್ಯ ಸಚಿವರು) :

ಅ) ಸುಳ್ಯ ಮತ್ತು ಐವರ್ನಾಡು ರಬ್ಬರ್ ವಿಭಾಗಗಳ ಹೆಚ್ಚಿನ ಪ್ರದೇಶವು ಸುಳ್ಯ ವಿಧಾನ ಸಭಾ ಕ್ಷೇತ್ರದಲ್ಲಿರುವುದರಿಂದ ಈ ವಿಭಾಗಗಳ ಪೂರ್ತಿ ರಸ್ತೆಯ ವಿವರಗಳನ್ನು ನೀಡಲಾಗಿದೆ.

ಎ) ಸುಳ್ಯ ರಬ್ಬರ್ ವಿಭಾಗ, ಸುಳ್ಯ : 87.448 ಕಿ.ಮೀ.

ಬಿ) ಐವರ್ನಾಡು ರಬ್ಬರ್ ವಿಭಾಗ, ಸುಳ್ಯ : 69.984 ಕಿ.ಮೀ.

ಸಿ) ರಬ್ಬರ್ ಮರುನಾಟಿಕೆ ಯೋಜನೆ, ಸೋಣಂಗೇರಿ : 15.266 ಕಿ.ಮೀ.

ಈ ರಸ್ತೆಗಳ ದುರಸ್ತಿ ಕಾರ್ಯವನ್ನು ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದ ಮತಿಯಿಂದಲೇ ಮಾಡಿಸಲಾಗುತ್ತದೆ.

ಆ) 1993-94 ಮತ್ತು 1994-95ನೇ ಸಾಲಿನಲ್ಲಿ ಈ ರಸ್ತೆಗಳ ದುರಸ್ತಿಗೆ ತಗುಲಿದ ವೆಚ್ಚದ ವಿವರ ಈ ಕೆಳಗಿನಂತಿವೆ.

1993-94 ..... ರೂ. 9,66,314.34

1994-95 ..... ರೂ. 13,45,809.03

ರಬ್ಬರ್ ಪ್ಲಾಂಟೇಷನ್‌ನಲ್ಲಿ ವೀಡಿಂಗ್‌ಗೆ ತಗುಲಿದ ವೆಚ್ಚ

338- ಶ್ರೀ ಎಸ್. ಅಂಗಾರ (ಸೂಳ್ಯ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಬ್ಬರ್ ಪ್ಲಾಂಟೇಷನ್‌ನಲ್ಲಿ ಒಂದು ವರ್ಷದಲ್ಲಿ ಎಷ್ಟು ಬಾರಿ (ವೀಡಿಂಗ್) ಕಾಡು ತೆಗೆವುದು, ಮತ್ತು ಕಳೆ ತೆಗೆದಿದ್ದಕ್ಕೆ ಒಂದು ಬಾರಿಗೆ ತಗಲುವ ವೆಚ್ಚವೆಷ್ಟು.

ಆ) ಒಟ್ಟು ಎಷ್ಟು ಉಪ ವಿಭಾಗಗಳಲ್ಲಿ ವೀಡಿಂಗ್‌ಗಾಗಿ (ಕಳೆ ತೆಗೆಯಲು) ಎಷ್ಟು ಹಣ ಖರ್ಚಾಗುವುದು? (ವಿವರ ನೀಡುವುದು)

ಶ್ರೀ ಹೆಚ್. ವೈ. ಮೇಟಿ. (ಅರಣ್ಯ ಸಚಿವರು) :

ಆ) ರಬ್ಬರ್ ಪ್ಲಾಂಟೇಷನ್‌ನಲ್ಲಿ ಒಂದು ವರ್ಷದಲ್ಲಿ ಮೂರು ಬಾರಿ ವೀಡಿಂಗ್ ಮಾಡಲಾಗುತ್ತದೆ ಈ ಕಾರ್ಯಕ್ಕೆ ಒಂದು ಬಾರಿಗೆ ತಗಲುವ ವೆಚ್ಚವು ಈ ಕೆಳಗಿನಂತಿದೆ (1994-95ರಲ್ಲಿದ್ದಂತೆ)

ವಿಸ್ತೀರ್ಣ	ಮೊತ್ತ
2910-63 ಹೆ. (7192-17 ಎಕರೆ)	ರೂ. 10,82,573-000

ಆ) 1994-95}ೇ ಸಾಲಿನಲ್ಲಿ ಸೂಳ್ಯ ವಿಭಾಗ ಐರ್ವನಾಡು ವಿಭಾಗ ಮತ್ತು ಮರು ನಾಟಿಕೆ ಉಪವಿಭಾಗದಲ್ಲಿ ವೀಡಿಂಗಗಾಗಿ ಖರ್ಚಾದ ಮೊತ್ತದ ವಿವರ ಈ ಕೆಳಗಿನಂತಿದೆ.

ವಿಸ್ತೀರ್ಣ	ಮೊತ್ತ	ಷರಾ
2910-63 (7192-17 ಎಕರೆ)	ರೂ. 28,47,138-00	1 ಮತ್ತು 2ನೇ ವೀಡಿಂಗನ್ನು ಶೇಕಡಾ 100 ವಿಸ್ತೀರ್ಣದಲ್ಲಿ ಕೈಗೊಳ್ಳಲಾಗುತ್ತದೆ. 3ನೇ ವೀಡಿಂಗ್‌ನಲ್ಲಿ ಅವಶ್ಯಕತೆಗನು ಗುಣವಾಗಿ ಶೇಕಾಡ 65ರಿಂದ 75ರಷ್ಟು ಸೀಮಿತಗೊಳಿಸಲಾಗುತ್ತದೆ.

ಜಮಖಂಡಿಯ ಪಿ.ಜಿ. ಪದವಿ ಪೂರ್ವ ಮಾಧ್ಯಮಿಕ ಹಾಗೂ ಪ್ರಾಥಮಿಕ ವರ್ಗಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳ ಸಂಖ್ಯೆ.

341 - ಶ್ರೀ ಬಸವನಗೌಡ ಪಾಟೀಲ್ (ವಿಜಾಪುರ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟುಉತ್ತರಿಸುವರೆ?

ಅ) ವಿಜಾಪುರ ಜಮಖಂಡಿಯಲ್ಲಿ ಪಿ.ಜಿ. ಪದವೀಪೂರ್ವದ ಮಾಧ್ಯಮಿಕ ಹಾಗೂ ಪ್ರಾಥಮಿಕ ವರ್ಗಗಳು ಸೇರಿ ಎಷ್ಟು ಜನ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ?

ಆ) ಈ ವಿದ್ಯಾಸಂಸ್ಥೆಯಲ್ಲಿ ಸ್ಥಳದ ಹಾಗೂ ಮೈದಾನದ ಅಭಾವವಿದೆಯೇ?

ಇ) ಪ್ರೌಢಶಾಲೆಗೆ ಸರ್ಕಾಕರಿಂದ ಈಗಾಗಲೇ ಮಂಜೂರಾದ 3 ಲಕ್ಷ ರೂಪಾಯಿಗಳಲ್ಲಿ ಸ್ಥಳದ ಅಭಾವದಿಂದ ಕೋಣೆಗಳಲ್ಲಿ ನಿರ್ಮಿಸುವುದಾಗಿಲ್ಲವೆಂಬುದು ಸರಕಾರದ ಗಮನಕ್ಕೆ ಬಂದಿದೆಯೇ?

ಈ) ಸಂಸ್ಥೆಯ ಪ್ರಾಚಾರ್ಯರಿಂದ ಅನುಮತಿ ಪಡೆಯದೇ, ಅದೇ ಆವರಣದಲ್ಲಿ ಉರ್ದು ಪ್ರೌಢಶಾಲೆ ಕಟ್ಟುತ್ತಿರುವುದು ನಿಜವೇ ಹಾಗೂ ಅದು ಸಮಂಜವೇ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಪ್ರಾಥಮಿಕ ವಿಭಾಗದ ಮಕ್ಕಳ ಸಂಖ್ಯೆ 130